ತಮಿಳುನಾಡು ಸರ್ಕಾರಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಗಳು ಇತ್ಯರ್ಥವಾದ ನಂತರ ನೀರಿನ ಲಭ್ಯತೆ ಆಧಾರದ ಮೇಲೆ ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಈ ಯೋಜನೆಗೆ ಯಾವುದೇ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

**300 ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)** : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ನಿಧಿಗೆ ಹೋಬಳಿ, ನಿಧಿಗೆ ಗ್ರಾಮ ಸ.ನಂ. 152, 153, 156 ಇತ್ಯಾದಿ ಸರ್ಕಾರಿ ಜಮೀನಿನ ಪೈಕಿ ಕೆಐಎಡಿಬಿಗೆ ವರ್ಗಾಯಿಸಿದ ಜಮೀನಿನ ವಿಸ್ತೀರ್ಣವೆಷ್ಟು; ಯಾವ ಷರತ್ತು ವಿಧಿಸಿ ಈ ಜಮೀನನ್ನು ಕೆಐಎಡಿಬಿಗೆ ನೀಡಲಾಗಿದೆ;

ಆ) ಹಾಗಿದ್ದಲ್ಲಿ, ಈ ಪೈಕಿ ಕೆಐಎಡಿಬಿ ಶಾಲೆಗೆ ಮನೆ, ಇತ್ಯಾದಿ (ಕೈಗಾರಿಕೇತರ ಉದ್ದೇಶ) ಗಳಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ಬಾಬಿನಿಂದ ಕೆಐಎಡಿಬಿ ಜಮಾ ಮಾಡಿಸಿಕೊಂಡ ಮೊಬಲಗು ಎಷ್ಟು; ರಾಷ್ಟ್ರೀಯ ಹೆದ್ದಾರಿ ಪಕ್ಕದ ಬೆಲೆ ಬಾಳುವ ಕೃಷಿಯೇತರ ಕೈಗಾರಿಕಾ ಉದ್ದೇಶದ ಈ ಜಮೀನು ವರ್ಗಾಯಿಸಲು ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ; ಹಾಗಿದ್ದಲ್ಲಿ, ಈ ಪ್ರದೇಶದ ಈಗಿನ ಮಾರುಕಟ್ಟೆ ಬೆಲೆ ಏನು, ಹಾಗೂ ತೆರವುಪಡಿಸಲು ತೆಗೆದುಕೊಂಡ ಕ್ರಮಗಳೇನು?

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)** :

ಅ) ಶಿವಮೊಗ್ಗ ತಾಲ್ಲೂಕು ನಿಧಿಗೆ ಹೋಬಳಿ, ನಿಧಿಗೆ ಗ್ರಾಮ ಸರ್ವೆ ನಂ. 152, 153, 156 ಸರ್ಕಾರಿ ಜಮೀನಿನ ಪೈಕಿ ಸ.ನಂ. 152 ಮತ್ತು 153 ಮಂಡಳಿಯು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಸ.ನಂ. 131, 139 ಮತ್ತು 156 ರಲ್ಲಿ 295-37 ಎಕರೆ ಸರ್ಕಾರಿ ಜಮೀನನ್ನು ಸರ್ಕಾರದ ಆದೇಶ ಸಂ. ಆರ್‌ಡಿ/61/ಎ; ಜಿಎಸ್/2001 ದಿನಾಂಕ: 2.7.2002 ರಂತೆ ಮಂಡಳಿಗೆ

ಮಂಜೂರಾಗಿದೆ. ಎಕರೆ ಒಂದಕ್ಕೆ ರೂ.50,000/– ಹಾಗೂ ಇತರೆ ಶುಲ್ಕಗಳನ್ನು ಸರ್ಕಾರಕ್ಕೆ ಜಮಾ ಮಾಡುವ ಷರತ್ತಿನ ಮೇರೆಗೆ ಮಂಜೂರು ಮಾಡಿ ಮಂಡಳಿಗೆ ವರ್ಗಾಯಿಸಲಾಗಿದೆ. ಮಾರುಕಟ್ಟೆ ಬೆಲೆ ಭೂಪರಿವರ್ತನಾ ಶುಲ್ಕ ಮತ್ತು ಪೋಡಿ ಶುಲ್ಕ ಸೇರಿದಂತೆ ಒಟ್ಟು ರೂ.2,76,86,878–00 ಗಳನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಜಮಾ ಮಾಡಲಾಗಿದೆ.

ಆ) ನಿಧಿಗೆ ಗ್ರಾಮದ ಸರ್ಕಾರಿ ಸ.ನಂ. 131, 139, 156ರ ಜಮೀನಿನಲ್ಲಿ ಶಾಲೆ, ಮನೆ ಇತ್ಯಾದಿ ಕೈಗಾರಿಕೇತರ ಉದ್ದೇಶಗಳಿಗೆ ಮಂಡಳಿ ವತಿಯಿಂದ ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ಇ) ಈ ಬಾಬ್ತಿನಲ್ಲಿ ಕೈಗಾರಿಕೇತರ ಉದ್ದೇಶಕ್ಕೆ ನಿವೇಶನ ಮಂಜೂರು ಮಾಡಿರುವುದಿಲ್ಲ. ಹಾಗೂ ಈ ಬಾಬ್ತು ಹಣ ಮಂಡಳಿಗೆ ಜಮಾ ಮಾಡಿಕೊಂಡಿರುವುದಿಲ್ಲ.

ನಿಧಿಗೆ ಗ್ರಾಮದ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ ಖುಷ್ಕಿ ಜಮೀನಿಗೆ ರೂ. 2.05 ಲಕ್ಷ, ಮಳೆ ಆಧಾರಿತ ಜಮೀನಿಗೆ ರೂ. 2.40 ಲಕ್ಷ, ಕೆರೆ ಪ್ರದೇಶಕ್ಕೆ ರೂ. 2.70 ಲಕ್ಷ, ನಾಲಾ ಪ್ರದೇಶದ ಜಮೀನಿಗೆ ರೂ. 3.40 ಲಕ್ಷದಂತೆ ಉಪ ನೋಂದಣಾಧಿಕಾರಿಗಳ ಕಚೇರಿ ದಾಖಲೆಯಂತೆ ಬೆಲೆ ನಿಗದಿಪಡಿಸಿದೆ.

ತೆರವುಪಡಿಸುವ ಪ್ರಕರಣಗಳು ಯಾವುದು ಇರುವುದಿಲ್ಲ.

**307 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಪಟ್ಟಣದ ಸಮೀಪದಲ್ಲಿರುವ ಪುನರ್ವಸತಿ ಕೇಂದ್ರಗಳೆಷ್ಟು?

ಆ) ಸದರಿ ಪುನರ್ವಸತಿ ಕೇಂದ್ರಗಳಲ್ಲಿ ಇರುವ ಕೊಳವೆ ಬಾವಿಗಳಲ್ಲಿಯ ನೀರು ಫ್ಲೋರೈಡ್ ಯುಕ್ತವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಜಮಖಂಡಿ ನಗರದ ಕುಡಿಯುವ ನೀರಿನ ಯೋಜನೆಯಾದ ಪುನರ್ವಸತಿ ಕೇಂದ್ರಗಳಿಗೆ ಶುದ್ಧೀಕರಿಸಿದ ನೀರು ಕೊಡುವ ಕಾರ್ಯದ ವಿಳಂಬಕ್ಕೆ ಕಾರಣಗಳೇನು?